**ಸಿ.ಸಿ.ನಂ.: 1566/2022**

ಪಿ.ಡಬ್ಲ್ಯೂ: 1

(ಇಂದು ದಿನಾಂಕಃ **25–02–2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಪಿ.ಎಚ್.ಕೆ. ವಕೀಲರಿಂದ**

1. ಆರೋಪಿತಳು ಈ ಪ್ರಕರಣದ ಸಾಲವನ್ನು ಆಕೆಯ ವಯಕ್ತಿಕ ವಿಚಾರಕ್ಕಾಗಿ ತೆಗೆದುಕೊಂಡಿರುತ್ತಾಳೆ. ಸಾಲದ ಅರ್ಜಿಯಲ್ಲಿ ಆರೋಪಿತಳ ಗಂಡನು ವ್ಯಾಪಾರವನ್ನು ಮಾಡುತ್ತಾನೆ ಎಂದು ಸಾಲವನ್ನು ಪಡೆದಿರುತ್ತಾಳೆ. ಆರೋಪಿತಳ ಗಂಡನು ಸೋಲಾರಗೆ ಸಂಬಂಧಿಸಿದ ವ್ಯಾಪಾರವನ್ನು ಮಾಡುತ್ತಾನೆ. ನಮ್ಮ ಆಡಳಿತ ಮಂಡಳಿಯವರು ಸಾಲದ ಅರ್ಜಿಯಲ್ಲಿ ಯಾವುದೇ ಸಹಿಯನ್ನು ಮಾಡುವುದಿಲ್ಲ.

2. ನಿಪಿ7 ರಲ್ಲಿ ಅಧ್ಯಕ್ಷರ ಸಹಿ ಇರುವುದಿಲ್ಲ. ಕೇವಲ ಸೀಲ ಮಾತ್ರ ಇದೆ ಎಂದರೆ ಸರಿ. ಈ ಸಾಲಕ್ಕೆ ಸಂಬಂಧಿಸಿದಂತೆ ದಿನಾಂಕಃ 04/11/2018 ರಂದು ಆಡಳಿತ ಮದಡಳಿಯ ಸಭೆ ನಡೆದಿರುತತದೆ. ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಪೂರ್ವದಲ್ಲಿ ನಮ್ಮ ಫಿರ್ಯಾದಿ ಸಂಸ್ಥೆಯ ಸದಸ್ಯತ್ವವನ್ನು ಹೊಂದಿರಬೇಕು ಎಂದರೆ ಸರಿ. ಹಾಗೇ ಸದಸ್ಯತ್ವವನ್ನು ಹೊಂದಿದ ಸಂದರ್ಭದಲ್ಲಿ ಮಾತ್ರ ಸಾಲಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು ಎಂದರೆ ಸರಿ. ಸದಸ್ಯತ್ವವನ್ನು ಹೊಂದದೇ ಇದ್ದ ಪಕ್ಷದಲ್ಲಿ ನಾವು ಯಾರಾದರೂ ಸಾಲದ ಅರ್ಜಿಯನ್ನು ನೀಡಿದರೆ ಅದನ್ನು ಬಾಕಿ ಇಡುತ್ತೇವೆ.

3. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿತಳು ದಿನಾಂಕಃ 29/09/2018 ರಂದು ಸದಸ್ಯತ್ವವನ್ನು ಪಡೆದುಕೊಂಡಿರುತ್ತಾಳೆ. ನಿಪಿ8 ರ ಅನ್ವಯ ದಿನಾಂಕಃ 14/11/2018 ರಂದು

ಆರೋಪಿತಳು ಸದಸ್ಯತ್ವವನ್ನು ಹೊಂದಿದ್ದಳು ಎಂದು ನಮೂದು ಇದೆ ಎಂದರೆ ಸಾಕ್ಷಿಯು ಸದಿ ದಿನಾಂಕವು ಆರೋಪಿತಳು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ದಿನಾಂಕ ಆಗಿರುತ್ತದೆ ಎಂದು ನುಡಿಯುತ್ತಾರೆ.

4. ನಿಪಿ 11 ರಲ್ಲಿ ಯಾವ ದಿನಾಂಕದಂದು ನಮಗೆ ಹಣ ಬರಲು ಬಾಕಿ ಇದೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ಸದ್ರಿ ದಾಖಲಾತಿಯ ಕೆಳಗಡೆ ಯಾವುದೇ ದಿನಾಂಕಗಳ ಕುರಿತಾಗಿ ನಮೂದು ಇಲ್ಲ ಎಂದರೆ ಸರಿ. ನಿಪಿ11 ರಲ್ಲಿ ಸಾಲದ ಕಂತುಗಳು ಕುರಿತಾಗಿ ನಮೂದ ಇಲ್ಲ ಎಂದರೆ ಸಾಕ್ಷಿಯು ನಿಪಿ 11 ಸಾಲದ ಖಾತೆಯ ಉತರ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಾವು ಸಾಲವು ಖಾತೆಯ ಉತಾರ ಹಾಜರುಪಡಿಸಿರುವುದಿಲ್ಲ. ನಿಪಿ 11 ಆರೋಪಿತಳಿಗೆ ಸಂಬಂಧಿಸಿದ ಸಾಲದ ಕಟ್ ಬಾಕಿ ಯಾದ ವಿವರ ಆಗಿರುತ್ತದೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಧಾನ ಪ್ರಭಾರ ಪ್ರ.ದ.ನ್ಯಾ.ದಂ. ಕುಮಟಾ